# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 778(972)

ಸದಸ್ಯರ ಹೆಸರು : ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 13.12.2023.

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು ಪೆಂಡರಾನಹಳ್ಳಿ ಗ್ರಾಮದಲ್ಲಿ ಅನಾದಿ ಕಾಲದಿಂದಲೂ ಶವ ಸಂಸ್ಕಾರ ಮಾಡಿಕೊಂಡು ಬರುತ್ತಿದ್ದ ಸರ್ಕಾರಿ ಗುಂಡು ತೋಪು ಸರ್ವೆ ನಂ.65 ರಲ್ಲಿ ಸ್ಮಶಾನ ಅಭಿವೃದ್ದಿಗಾಗಿ ಪೆದ್ದನಹಳ್ಳಿ ಗ್ರಾಮ ಪಂಚಾಯಿತಿಯಿಂದ 2013-14 ನೇ ಸಾಲಿನಲ್ಲಿ ಹಾಗೂ 2020-21ನೇ ಸಾಲಿನಲ್ಲಿ ಒಟ್ಟು 6 ಲಕ್ಷ ರೂ. ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಬಿಡುಗಡೆ ಮಾಡಿ ಸ್ಮಶಾನ ಅಭಿವೃದ್ದಿಗೆ ಕ್ರಮ ಕೈಗೊಂಡಿದ್ದು, ಗ್ರಾಮಸ್ಥರು ಅರ್ಜಿ ಸಲ್ಲಿಸಿದ್ದರೂ ಕೂಡ ಸ್ಮಶಾನವೆಂದು ಘೋಷಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು) | ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಪೆಂಡರಾನಹಳ್ಳಿ ಗ್ರಾಮದ ಸ.ನಂ.65 ಗುಂಡುತೋಪು ಜಮೀನಾಗಿರುತ್ತದೆ. ಆದ್ದರಿಂದ ಅದೇ ಸರ್ವೆ ನಂಬರ್‌ಗೆ ಹೊಂದಿಕೊಂಡಂತೆ ಇರುವ ಪೆಂಡರಾನಹಳ್ಳಿ ಗ್ರಾಮದ ಸ.ನಂ.17ರಲ್ಲಿ, 0-20 ಗುಂಟೆ ಜಮೀನನ್ನು ಸಾರ್ವಜನಿಕ ಸ್ಮಶಾನಕ್ಕಾಗಿ ರಾಜಸ್ವ ನಿರೀಕ್ಷಕರು ಸ್ಥಳ ತನಿಖೆ ನಡೆಸಿ, ರಸ್ತೆ ಸಂಪರ್ಕ ಇದ್ದು, ಸಾರ್ವಜನಿಕ ಸ್ಮಶಾನಕ್ಕೆ ಯೋಗ್ಯವಿರುತ್ತದೆಂದು ವರದಿ ಸಲ್ಲಿಸಿದ ಕಾರಣ ಜಮೀನು ಮಂಜೂರು ಮಾಡಲಾಗಿರುತ್ತದೆ. |
| ಆ | ಸದರಿ ಗ್ರಾಮದ ಸರ್ವೆ ನಂ:17ರಲ್ಲಿ ಬಡ ರೈತರೊಬ್ಬರು 40-50 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದು, 1999 ರಲ್ಲಿ ನಮೂನೆ 53ರ ಅರ್ಜಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರೂ ಕೂಡ ಇಲ್ಲಿ ಯಾವುದೇ ಅರ್ಜಿ ಇಲ್ಲವೆಂದು ಸಾಗುವಳಿ ಮಾಡುತ್ತಿಲ್ಲವೆಂದು ಆರ್.ಐ ಮತ್ತು ವಿ.ಎ ಸ್ಥಳ ಪರಿಶೀಲಿಸದೆ ವರದಿ ನೀಡಿ ಫಲವತ್ತಾದ ಹಾಗೂ ಜನರು ವಾಸಿಸುವ ಸ್ಥಳದಲ್ಲಿ ಸ್ಮಶಾನ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಮಂಜೂರು ಆದೇಶವನ್ನು ರದ್ದು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಕಡಬಾ ಹೋಬಳಿ, ಪೆಂಡಾರನಹಳ್ಳಿ ಗ್ರಾಮದ ಸನಂ.17 ರಲ್ಲಿ ಒಟ್ಟು ವಿಸ್ತೀರ್ಣ 25-05 ಎಕರೆ/ಗುಂಟೆ ಜಮೀನಿದ್ದು, ಅರ್ಜಿದಾರರು 4-00 ಎಕರೆ ಜಮೀನಿನಲ್ಲಿ ಅನುಭವದಲ್ಲಿದ್ದು, ವಿಸ್ತೀರ್ಣ 0-20 ಗುಂಟೆಯಲ್ಲಿ ಅನುಭವದಲ್ಲಿ ಇಲ್ಲದ ಕಾರಣ ಪೆಂಡಾರನಹಳ್ಳಿ ಗ್ರಾಮದ ಸಾರ್ವಜನಿಕ ಸ್ಮಶಾನಕ್ಕಾಗಿ ರಾಜಸ್ವ ನಿರೀಕ್ಷಕರು ಸ್ಥಳ ತನಿಖೆ ನಡೆಸಿ, ರಸ್ತೆ ಸಂಪರ್ಕ ಇದ್ದು, ಸಾರ್ವಜನಿಕ ಸ್ಮಶಾನಕ್ಕೆ ಯೋಗ್ಯವಿದ್ದು, ಸ್ಮಶಾನಕ್ಕಾಗಿ ಜಮೀನು ಮಂಜೂರು ಮಾಡಲಾಗಿರುತ್ತದೆ. |

ಸಂಖ್ಯೆ: ಆರ್‌ಡಿ 75 ಎಲ್‌ಜಿಟಿ 2023

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು